**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

**ಸಂ:** ಸಾಗೊವಿ/ಪ್ಯೆ.ಪ್ರೊ/ಸಿಕಾಂ/2021-22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-1,
ದಿನಾಂಕ: 10.06.2021

**ಸುತ್ತೋಲೆ**

**ವಿಷಯ:** 2021-22 ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಉತ್ಪಾದಿಸುವ ಸಿಟಿ ಕಾಂಪೋಸ್ಟ್ ಅನ್ನು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ. ಬೆಂಗಳೂರು ರವರ ಮೂಲಕ ದೊಡ್ಡ ಪ್ರಮಾಣ(BULK)ದಲ್ಲಿ ನೇರವಾಗಿ ರೈತರ ಜಮೀನಿಗೆ ಸರಬರಾಜು ಮಾಡುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ ಕೃಇ/83/ಕೃಮಸ/2017 ಬೆಂಗಳೂರು ದಿನಾಂಕ: 06-06-2017.
2. ಇಲಾಖೆಯ ದರ ಕರಾರು ಸುತ್ತೋಲೆ ಸಂ. ಸಾಗೊವಿ/ದಕ/ಇ-ಟೆಂ/2021-22 ದಿನಾಂಕ: 15.05.2021.
3. ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂ.ಕೆಸಿಡಿಸಿ/ಕೃಇ/ಗೊಬ್ಬರ ಸರಬರಾಜು/11/2021-22 ದಿನಾಂಕ:31.05.2021.

******

ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಗರ ತ್ಯಾಜ್ಯದಿಂದ ಉತ್ಪಾದಿಸುವ ಸಿಟಿ ಕಾಂಪೋಸ್ಟ್ ಅನ್ನು BULK ಆಗಿ ಇಲಾಖೆಯಲ್ಲಿ ನೊಂದಾಯಿಸುವ ರೈತರ ಜಮೀನುಗಳಿಗೆ ನೇರವಾಗಿ ರಿಯಾಯತಿ ದರದಲ್ಲಿ ಸರಬರಾಜು ಮಾಡಿ 2016-17ನೇ ಸಾಲಿನಿಂದ ಪ್ರಾಯೋಗಿಕ ಪ್ರಾಯೋಜನೆ (PILOT PROJECT)ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿರುತ್ತದೆ.

ಮುಂದುವರೆದು ಸದರಿ ಕಾರ್ಯಕ್ರಮವನ್ನು ರಾಜ್ಯಾದ್ಯಂತ ವಿಸ್ತರಿಸಿ ಸಿಟಿ ಕಾಂಪೋಸ್ಟ್ ಉತ್ಪಾದಕರಿಂದ ಟೆಂಡರ್ ಮೂಲಕ ಬಿಡ್ ಆಹ್ವಾನಿಸಿ ಅರ್ಹತೆ ಪಡೆದ ಸರಬರಾಜುದಾರರು ಮತ್ತು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ರವರ ಮೂಲಕ ಇಲಾಖೆಯಲ್ಲಿ ನೊಂದಾಯಿಸುವ ರೈತರ ಜಮೀನುಗಳಿಗೆ ನೇರವಾಗಿ ರಿಯಾಯತಿ ದರದಲ್ಲಿ ಸರಬರಾಜು ಮಾಡಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗಿರುತ್ತದೆ.

ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು, ರವರು ಸದರಿ ಕಾರ್ಯಕ್ರಮವನ್ನು ಪ್ರಸಕ್ತ 2021-22ನೇ ಸಾಲಿಗೆ ಮುಂದುವರೆಸಲು ಉಲ್ಲೇಖಿತ ಪತ್ರ-3ರಲ್ಲಿ ಇಲಾಖೆಯನ್ನು ಕೋರಿರುತ್ತಾರೆ, ಅದರಂತೆ, 2021-22ನೇ ಸಾಲಿನ ಇಲಾಖೆಯ ಟೆಂಡರ್ ನಲ್ಲಿ ನಿಗದಿಯಾಗುವ L1 ದರದಲ್ಲಿ ಸಿಟಿ ಕಾಂಪೋಸ್ಟ್ ಅನ್ನು ದೊಡ್ಡ ಪ್ರಮಾಣ(BULK)ದಲ್ಲಿ ಸರಬರಾಜು ಮಾಡಲು ತಯಾರಿರುವುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು, ರವರಿಗೆ ಸಾವಯವ ಗೊಬ್ಬರ ಮಾರಾಟ ಮಾಡಲು KTPP1999 ಅಧಿನಿಯಮ ಕಲಂ 4ಜಿ ರಡಿ ವಿನಾಯತಿ ನೀಡಿರುವುದರಿಂದ, 2021-22ನೇ ಸಾಲಿನ ಇಲಾಖೆಯ ಟೆಂಡರ್ ನಲ್ಲಿ ನಿಗಧಿಪಡಿಸಿರುವಂತೆ ಸಿಟಿ ಕಾಂಪೋಸ್ಟ್ ಅನ್ನು ಪ್ರತಿ ಮೆ.ಟನ್ ಗೆ ರೂ.2300/- ರಂತೆ ನೋಂದಾಯಿಸುವ ರೈತರ ಜಮೀನಿಗೆ ನೇರವಾಗಿ ಸರಬರಾಜು ಮಾಡಲು ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು, ರವರಿಗೆ ಸೂಚಿಸಿದೆ.

17/06/21

**ಕಾರ್ಯಕ್ರಮದ ಅನುಷ್ಠಾನ ಮಾರ್ಗಸೂಚಿ:-**

- ಸದರಿ ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು, ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಉತ್ಪಾದನಾ ಘಟಕಗಳಲ್ಲಿ ಉತ್ಪಾದಿಸುವ ಸಿಟಿ ಕಾಂಪೋಸ್ಟ್ ಗೊಬ್ಬರವನ್ನು ಇಲಾಖೆಯಲ್ಲಿ ನೋಂದಾಯಿಸುವ ರೈತರ ಜಮೀನಿಗೆ ನೇರವಾಗಿ ವಿತರಿಸಲು ಅನುಮೋದನೆ ನೀಡಲಾಗಿದೆ.
- ರೈತ ಸಂಪರ್ಕ ಕೇಂದ್ರದಲ್ಲಿ ಫಲಾನುಭವಿ ರೈತರ ನೋಂದಣಿಯನ್ನು ಕೆ-ಕಿಸಾನ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಮಾಡಿಸಿ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳು ಲಭ್ಯವಿರುವ ಅನುದಾನದ ಮಿತಿಯಲ್ಲಿ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ರವರಿಗೆ ಸರಬರಾಜಿಗೆ ಬೇಡಿಕೆ ನೀಡುವುದು.
- ಜಿಲ್ಲೆಗಳು ಉಲ್ಲೇಖ 2ರಲ್ಲಿ ಕಳುಹಿಸಿದ ದರ ಕರಾರು ಮಾರ್ಗಸೂಚಿಯನ್ನು ತಪ್ಪದೇ ಪಾಲಿಸುವುದು.
- ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು ರವರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಿಂದ ಇಂಡೆಂಟ್ ಪಡೆದ ನಂತರ ಸರಬರಾಜು ಮಾಡುವುದು.
- ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಅನುಬಂಧದಲ್ಲಿ ತಿಳಿಸಿರುವಂತೆ ಸಿಟಿ ಕಾಂಪೋಸ್ಟ್ ಗೊಬ್ಬರವನ್ನು ಸರಬರಾಜು ಮಾಡಿದ ಪ್ರಮಾಣಕ್ಕೆ ರೈತರಿಂದ ಪ್ರತಿ ಟನ್‌ಗೆ ರೂ. 1150/- ಹಾಗು ರೈತರೇ ನೇರವಾಗಿ ಗೊಬ್ಬರದ ಉತ್ಪಾದನಾ ಘಟಕದಿಂದ ಸಾಗಿಸಿಕೊಂಡಲ್ಲಿ ಪ್ರತಿ ಟನ್‌ಗೆ ರೂ. 200/- ರೈತರ ವಂತಿಕೆ ಪಡೆದು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಮುಖಾಂತರ ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಬೆಂಗಳೂರು ರವರಿಗೆ ಪಾವತಿಸುವುದು.
- ನಂತರ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು ಸಿಟಿ ಕಾಂಪೋಸ್ಟ್ ಗೊಬ್ಬರವನ್ನು ರೈತರಿಗೆ ಸರಬರಾಜು ಮಾಡಿರುವ ಕುರಿತು ಖುದ್ದು ಭೇಟಿ ನೀಡಿ ಖಾತರಿ ಪಡಿಸಿಕೊಳ್ಳುವುದು.
- ಸಿಟಿ ಕಾಂಪೋಸ್ಟ್ ಗೊಬ್ಬರವನ್ನು ಪೂರೈಕೆ ಮಾಡಿದ ನಂತರ ವಿತರಣೆಯಾದ ಪ್ರಮಾಣಕ್ಕೆ ಫಲಾನುಭವಿ ವಿವರಗಳನ್ನು ಪಡೆದು ಕೃಷಿ ಪರಿಕರ ಮತ್ತು ಗುಣನಿಯಂತ್ರಣ ಯೋಜನೆಯಡಿ ಮಣ್ಣಿನ ಸತ್ವ ಹೆಚ್ಚಿಸುವ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ: 2401-00-103-0-105 (106) ರಡಿ ರಿಯಾಯಿತಿ ಮೊತ್ತವನ್ನು ಅನುಬಂಧದಲ್ಲಿ ತಿಳಿಸಿರುವಂತೆ ಮೆ: ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು, ಇವರಿಗೆ ಪಾವತಿಸುವುದು.

**ಅನುಬಂಧ**

| ಕ್ರ. ಸಂ. | ಸರಬರಾಜುದಾರರ ವಿವರ | ನಿಗಧಿಪಡಿಸಿದ ಒಟ್ಟು ದರ (ರೂ. ಪ್ರತಿ ಮೆ.ಟನ್‌ಗೆ) | ಕೆ.ಸಿ.ಡಿ.ಸಿ ಮೂಲಕ ರೈತರ ಜಮೀನಿಗೆ ಸಾಗಿಸಿದರೆ ರೈತರು ಪಾವತಿಸಬೇಕಾದ ದರ (ರೂ. ಪ್ರತಿ ಮೆ.ಟನ್‌ಗೆ) | ರೈತರೇ ನೇರವಾಗಿ ಗೊಬ್ಬರ ಪ್ಲಾಂಟಿನಿಂದ ಸಾಗಿಸಿಕೊಂಡಲ್ಲಿ ರೈತರು ಪಾವತಿಸಬೇಕಾದ ದರ (ರೂ. ಪ್ರತಿ ಮೆ.ಟನ್‌ಗೆ) | ಸರ್ಕಾರದ ವಂತಿಗೆ (ರೂ. ಪ್ರತಿ ಮೆ.ಟನ್‌ಗೆ) |
|---|---|---|---|---|---|
| 1 | ಸಿಟಿ ಕಾಂಪೋಸ್ಟ್ ಗೊಬ್ಬರ (4 ಎಂ ಎಂ ಅಳತೆಯ ಜರಡಿಯ ಮೂಲಕ ಹಾದು ಬಂದಿರುವ ಗೊಬ್ಬರ) | **2300/-** | **1150/-** | **200/-** | **1150/-** |

Piolet Project Circulars.doc

17/06/24

**ಅನುಮೋದಿತ ಸಂಸ್ಥೆಯ ವಿವರ:**

ಮೆ:ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ, ಬೆಂಗಳೂರು
ಹರಳಕುಂಟೆ, ಹೊಸೂರು ರಸ್ತೆ, ಬೆಂಗಳೂರು-560068
ಮೊಬೈಲ್ ನಂ:9480683433/9108002671/080-25730649
ಇ-ಮೇಲ್‌ವಿಳಾಸ; mdkcdc@gmail.com

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಜಿಲ್ಲೆಗಳು ಮಾರ್ಗಸೂಚಿಯನ್ವಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

17/06/21
ಕೃಷಿ ಆಯುಕ್ತರು

ಪ್ರತಿಯನ್ನು:

1. ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು ಇವರ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು(ಘ,ತ್ಯಾ,ನಿ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ವ್ಯವಸ್ಥಾಪಕರು, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಬೆಂಗಳೂರು ರವರಿಗೆ ಕಳುಹಿಸುತ್ತಾ ಜಂಟಿ ಕೃಷಿ ನಿರ್ದೇಶಕರು ನೀಡುವ ಮಾಹಿತಿ ಮೇರೆಗೆ ಸಿಟಿ ಕಾಂಪೋಸ್ಟ್ ಸರಬರಾಜು ಮಾಡಿ, ಸರಬರಾಜುವಿನ ಬಗ್ಗೆ ಪ್ರತಿ ವಾರ ನಿಗಧಿತ ನಮೂನೆಯಲ್ಲಿ ವರದಿಯನ್ನು ತಪ್ಪದೇ ಈ ಕಛೇರಿಗೆ ನೀಡುವಂತೆ ಕಳುಹಿಸಿದೆ.
4. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕೃಷಿ ಆಯುಕ್ತಾಲಯ ರವರ ಮಾಹಿತಿಗಾಗಿ
6. ಕೃಷಿ ಆಯುಕ್ತರು/ಕೃಷಿ ನಿರ್ದೇಶಕರು ರವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ.

*********